. fdRNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| ಭಾಗ- III | ಬೆಂಗಳೂರು, ಸೋಮವಾರ, ಮೇ ೦೪, ೨೦೧೫ (ವೈಶಾಖ ೧೪, ಶಕ ವರ್ಷ ೧೯೩೭) | ನಂ. ೪೬೮ |
|---|---|---|
| Part- III | Bengaluru, Monday, May 04, 2015 (Vaishakha 14, Shaka Varsha 1937) | No. 468 |



### ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ಅಧಿಸೂಚನೆ

ನಂ.ಇಎಲ್‌ಎನ್(2)ಸಿಆರ್ 09-2/2015-16, ದಿನಾಂಕ : 04-05-2015

1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ (ಕರ್ನಾಟಕ ಅಧಿನಿಯಮ 14) 5ನೇ ಪ್ರಕರಣದ ಉಪ ಪ್ರಕರಣ (5) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರು ಮಾಲೂರು ತಾಲ್ಲೂಕಿನ *28* ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಕ್ಷೇತ್ರಗಳಾಗಿ ವಿಭಜಿಸಿ ಈ ಕೆಳಕಂಡಂತೆ ಪಟ್ಟಿ ಮಾಡಿರುತ್ತಾರೆ. ಕೋಷ್ಟಕ-I ರ ಅಂಕಣ (2) ರಲ್ಲಿ ಕ್ಷೇತ್ರದ ಹೆಸರುಗಳನ್ನೂ, ಅಂಕಣ (3) ರಲ್ಲಿ ಪ್ರತಿ ಕ್ಷೇತ್ರದ ವ್ಯಾಪ್ತಿಯನ್ನೂ ಮತ್ತು ಅಂಕಣ (4) ರಲ್ಲಿ ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲ್ಪಟ್ಟ ಸ್ಥಾನಗಳ ಸಂಖ್ಯೆಗಳನ್ನು ಹೇಳಲಾಗಿದೆ. ಕೋಷ್ಟಕ-II ರ (2) ನೇ ಅಂಕಣದಲ್ಲಿ ನಿರ್ಧಿಷ್ಟಪಡಿಸಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸ್ಥಾನಗಳನ್ನು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗ "ಅ" ಮತ್ತು "ಬ" ವರ್ಗಗಳಿಗೆ ಸೇರಿದವರಿಗೆ ಮೀಸಲಿಡಲಾಗಿದೆ. ಹಾಗೂ ಹೀಗೆ ಮೀಸಲಿಡಲಾದ ಸ್ಥಾನಗಳ ಪೈಕಿ ಮಹಿಳೆಯರಿಗಾಗಿ (3)ನೇ ಅಂಕಣದಲ್ಲಿ ನಮೂದಿಸಿರುವ ಮೀಸಲಿಡಲಾದ ಚುನಾವಣಾ ಕ್ಷೇತ್ರಗಳನ್ನು ನಿರ್ಧಿಷ್ಟಪಡಿಸಿದಂತಿರತಕ್ಕದ್ದು. ಕೋಷ್ಟಕ-IIIರ (2) ನೇ ಅಂಕಣದಲ್ಲಿ ನಿರ್ಧಿಷ್ಟಪಡಿಸಿದ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸ್ಥಾನಗಳನ್ನು ಮೀಸಲಿಟ್ಟಿರುವುದಿಲ್ಲ. ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಲ್ಲಿ ಮೀಸಲಿಡದ ಸ್ಥಾನಗಳ ಪೈಕಿ ಅಂಕಣ (3) ರಲ್ಲಿ ನಿರ್ಧಿಷ್ಟಪಡಿಸಿದ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ.